# ಇಂಡಿಯಾ ಫೌಂಡೇಷನ್ ಫಾರ್ ದಿ ಆರ್ಟ್ಸ್ (ಐಎಫ್ಎ)

**'ಪ್ರಾಜೆಕ್ಟ್ 560' ರ ಅಡಿಯಲ್ಲಿ**

**ಕಲಾಯೋಜನೆಗಳ (ಸಂಶೋಧನೆ/ಅಭ್ಯಾಸ)**

**ಪ್ರಸ್ತಾವನೆಗಳನ್ನು ನಿರೀಕ್ಷಿಸುತ್ತಿದೆ...**

**ಕೊನೆ ದಿನಾಂಕ : ಶುಕ್ರವಾರ, ಸೆಪ್ಟೆಂಬರ್ 14, 2018**

***ಬೆಂಗಳೂರನ್ನು ನಿಮ್ಮ ವೇದಿಕೆಯಂತೆ, ಒಂದು ಕ್ಯಾನ್ವಸ್ಸಿನಂತೆ, ಪರಿವರ್ತಿಸಿ! ನಗರದ ವಿಭಿನ್ನ ಧ್ವನಿಗಳನ್ನು, ಸ್ಥಳಗಳನ್ನು, ಇತಿಹಾಸ-ನೆನಪುಗಳನ್ನು, ಭರವಸೆ ಹಾಗೂ ಅಭಿವ್ಯಕ್ತಿಗಳನ್ನು ಎಚ್ಚರಿಸಿ! ನಗರದ ನೆನಪುಗಳ ಪದರಗಳಲ್ಲಿ ಮುಳುಗಿರಿ! ಅದರ ಬಹು ವರ್ತಮಾನಗಳನ್ನು ಆಸ್ವಾದಿಸಿ! ಅಥವಾ ವೈವಿಧ್ಯಮಯ ಭವಿಷ್ಯಗಳನ್ನು ಕಲ್ಪಿಸಿ! ನಗರವೆಂದರೆ ಯಾರು? ಬೆಂಗಳೂರಿಗೆ ಎಂದರೆ ನಿಜವಾಗಿಯೂ ಏನು? ನಗರದ ನಿಜವಾದ ಶಕ್ತಿ ಹುಟ್ಟುವುದು ಎಲ್ಲಿಂದ ? ಹೀಗೆ ಬೆಂಗಳೂರೆಂಬ ಬೆಂಗಳೂರು ನಿಮ್ಮ ಮೆದುಳಲ್ಲಿ ಹಲವು ತರಂಗಗಳನ್ನು ಎಬ್ಬಿಸುತ್ತಿದ್ದರೆ... ಇದೋ ಈ ಕರೆ ನಿಮಗಾಗಿ!***

ಬೆಂಗಳೂರಿನ ಭೂತ, ವರ್ತಮಾನ ಹಾಗೂ ಭವಿಷ್ಯಗಳನ್ನು ಒಳಗೊಂಡಂತೆ ಕಲಾಯೋಜನೆಗಳ ರೂಪದ (ಸಂಶೋಧನೆ/ಅಭ್ಯಾಸ) ಪ್ರಸ್ತಾವನೆಗಳನ್ನು ನಾವು ನಿರೀಕ್ಷಿಸುತ್ತೇವೆ. ಕಲಾವಿದರು ಹಾಗೂ ಪರಿಣಿತರನ್ನು ಸಂಯೋಜಿಸುವ ಯೋಜನೆಗಳನ್ನು ಪ್ರೋತ್ಸಾಹಿಸಲಾಗುವುದು. ಈ ಯೋಜನೆಗಳ ಫಲಿತವಾಗಿ ಪ್ರದರ್ಶನಗಳ, ಇನ್‌ಸ್ಟಲೇಷನ್‌ಗಳು, ಕಿರುಚಿತ್ರಗಳು, ಸಂಶೋಧನಾ ವರದಿಗಳು ಇರಬಹುದು.

**ಯೋಜನೆಯ ಅವಧಿ : 8-12 ತಿಂಗಳುಗಳು**

**ಆಯವ್ಯಯ :** ಗರಿಷ್ಠ ರೂ. 4 ಲಕ್ಷ

**ಯಾರು ಅರ್ಜಿ ಸಲ್ಲಿಸಬಹುದು?** ;

ಕಲಾ ಅಭ್ಯಾಸಿಗಳು ಮತ್ತು ಸಂಶೋಧಕರು/ಪರಿಣಿತರು ಬರಹಗಾರರು, ಕವಿಗಳು, ಪ್ರದರ್ಶನ ಕಲಾವಿದರು, ದೃಶ್ಯಕಲಾವಿದರು, ಚಿತ್ರನಿರ್ಮಾಪಕರು, ಮತ್ತು ಡಿಜಿಟಲ್ ಕಲಾವಿದರು ಅರ್ಜಿ ಸಲ್ಲಿಸಬಹುದು. ಅರ್ಜಿದಾರರು ಭಾರತದ ಯಾವುದೇ ಭಾಗದ ನಿವಾಸಿಯಾಗಿದ್ದರೂ ಈ ಯೋಜನೆಯ ಕಾರ್ಯ ಚಟುವಟಿಕೆಗಳು ಬೆಂಗಳೂರಿನಲ್ಲಿ ಹಮ್ಮಿಕೊಳ್ಳಬೇಕಾಗುತ್ತದೆ. ಭಾರತದ ನಿವಾಸಿಯಾಗಿರಬೇಕು ಭಾರತೀಯ ನಿವಾಸಿಯಾಗದಿದ್ದ ಪಕ್ಷದಲ್ಲಿ ಕನಿಷ್ಠ ಐದು ವರ್ಷ ಭಾರತದಲ್ಲಿ ನೆಲಸಿರಬೇಕು.

**ಅರ್ಜಿ ಸಲ್ಲಿಸುವುದು ಹೇಗೆ?** ;
ಈ ಕೆಳಕಂಡ ಅಂಶಗಳನ್ನು ಒಳಗೊಂಡಂತೆ ಪ್ರಸ್ತಾವನೆ ಕಳುಹಿಸಿ

- ನಿಮ್ಮ ಈಗಿನ ಸಂಶೋಧನೆ ಅಥವಾ ನಿಮ್ಮ ವಿಮರ್ಶಾತ್ಮಕ ಕಲಾ ಅಭ್ಯಾಸಗಳು ಅಥವಾ ಬೆಂಗಳೂರಿನ ಬಗ್ಗೆ ಸಂಶೋಧನಾತ್ಮಕ ಕಾಳಜಿಗಳು
- ನಿಮ್ಮ ಯೋಜನೆಯ ವಿವರಗಳು
- ನೀವು ಒಳಗೊಳ್ಳುವ ಸಹಯೋಗಗಳು ಹಾಗೂ ಅದರ ಸ್ವರೂಪ
- ಕಾಲಮಿತಿ ಹಾಗೂ ಆಯವ್ಯಯ
- ಇದಕ್ಕೆ ಪೂರಕವಾಗಿ ನಿಮ್ಮ ಬರಹಗಳು, ಚಿತ್ರಗಳು, ದೃಶ್ಯ/ಶ್ರವ್ಯ ದಾಖಲೆಗಳು, ಅಥವಾ ಇನ್ನಿತರ ದಾಖಲೆಗಳನ್ನು ಮತ್ತು ನಿಮ್ಮ ಇತ್ತೀಚಿನ ಸ್ವವಿವರ (ವಿಳಾಸ, ದೂರವಾಣಿ ಸಂಖ್ಯೆ, ಇ-ಮೇಲ್ ವಿಳಾಸ) ಗಳನ್ನು ಕಳುಹಿಸಿ.

**ನಿಮ್ಮ ಪ್ರಸ್ತಾವನೆಗಳನ್ನು ಇಂಗ್ಲೀಷ್ ಒಳಗೊಂಡಂತೆ ಯಾವುದಾದರೂ ಭಾರತೀಯ ಭಾಷೆಯಲ್ಲಿ ಬರೆಯಬಹುದು**

ನಿಮ್ಮ ಪ್ರಸ್ತಾವನೆಗಳನ್ನು ಕಳೂಹಿಸುವ ಪೂರ್ವದಲ್ಲಿ ನೀವು ದೂರವಾಣಿ, ಇ–ಮೇಲ್ ಮುಖಾಂತರ ಅಥವಾ ಖುದ್ದಾಗಿ ನಮ್ಮನ್ನು ಸಂಪರ್ಕಿಸಬಹುದು. ಪ್ರಸ್ತಾವನೆಯ ದಾಖಲೆಗಳೊಂದಿಗೆ ಹಾರ್ಡ್‌ಕಾಪಿ ರೂಪದಲ್ಲಿ ಸೆಪ್ಟೆಂಬರ್ 14, 2018 ಶುಕ್ರವಾರದೊಳಗೆ ನಮ್ಮನ್ನು ತಲುಪಬೇಕು. ದಯವಿಟ್ಟು ಗಮನಿಸಿ ಆನ್‌ಲೈನ್ ಪ್ರಸ್ತಾವನೆಗಳನ್ನು ಸ್ವೀಕರಿಸಲಾಗುವುದಿಲ್ಲ.

**ಆಯ್ಕೆ ವಿಧಾನ :**

ಬಾಹ್ಯ ಸಮಿತಿ ಕೆಲವು ಆಯ್ದ ಪ್ರಸ್ತಾವನೆಗಳನ್ನು ಪರಿಶೀಲಿಸುತ್ತದೆ. ಈ ಪ್ರಸ್ತಾವನೆಗಳ ಬಗ್ಗೆ ವಿಸ್ತೃತ ಚರ್ಚೆ ನಡೆಸಲು ಸಾಧ್ಯವಾಗುವಂತೆ ಅರ್ಜಿದಾರರಿಗೆ ಸೂಚಿಸಲಾಗುವುದು. ಇವುಗಳಲ್ಲಿ ಎರಡು ಪ್ರಸ್ತಾವನೆಗಳನ್ನು ಅಕ್ಟೋಬರ್ 2018ರಲ್ಲಿ ಆಯ್ಕೆ ಮಾಡಿ ಪ್ರಕಟಿಸಲಾಗುತ್ತದೆ. ಇದಕ್ಕೆ ಸಂಬಂಧಪಟ್ಟಂತೆ ಐಎಫ್ಎ ನ ನಿರ್ಧಾರ ಅಂತಿಮವಾಗಿರುತ್ತದೆ.

**ಹೆಚ್ಚಿನ ಮಾಹಿತಿಗಾಗಿ:**

ಐಎಫ್ಎನ ಸುಮನ ಚಂದ್ರಶೇಖರ್, ಹಿರಿಯ ಕಾರ್ಯಕ್ರಮ ನಿರ್ವಾಹಕರು, sumana@indiaifa.org ಇವರನ್ನು ಸಂಪರ್ಕಿಸಬಹುದು.

**ನಿಮ್ಮ ಪ್ರಸ್ತಾವನೆಗಳನ್ನು ದಯವಿಟ್ಟು ಈ ಕೆಳಗಿನ ವಿಳಾಸಕ್ಕೆ ಕಳುಹಿಸಿ.**
**ಪ್ರಾಜೆಕ್ಟ್ 560, 2018**
**ಕಲಾಯೋಜನೆಗಳ (ಸಂಶೋಧನೆ/ಅಭ್ಯಾಸ)**
ಇಂಡಿಯಾ ಫೌಂಡೇಷನ್ ಫಾರ್ ದಿ ಆರ್ಟ್ಸ್
'ಅಪೂರ್ವ' ನೆಲಮಹಡಿ , ಸಂಖ್ಯೆ 259
ನಾಲ್ಕನೇ ತಿರುವು, ರಾಜ್ ಮಹಲ್ ವಿಲಾಸ್,
ಎರಡನೇ ಹಂತ, ಎರಡನೇ ಬ್ಲಾಕ್,
ಬೆಂಗಳೂರು– 560 094

ದೂರವಾಣಿ : 080–23414681/82/83

http://www.indiaifa.org/

**ಪ್ರಾಜೆಕ್ಟ್ 560 ರ ಕುರಿತು:**

**ಪ್ರಾಜೆಕ್ಟ್** 560 ಇದು ಐಎಫ್ಎ ಸಂಸ್ಥೆಯು ಬೆಂಗಳೂರಿಗೆ ವಿಶೇಷವಾಗಿ ಹಮ್ಮಿಕೊಂಡದ್ದಾಗಿದೆ. ಬೆಂಗಳೂರಿನ ಪಿನ್‌ಕೋಡ್‌ನ ಮೊದಲ ಮೂರು ಸಂಖ್ಯೆಗಳನ್ನು ಬಳಸಿಕೊಂಡು ಈ ಯೋಜನೆಯನ್ನು ಹೆಸರಿಸಲಾಗಿದೆ. ಯೋಜನೆ 560 ಕಲಾವಿದರು, ಮೇಧಾವಿಗಳು, ಸಂಘ–ಸಂಸ್ಥೆಗಳು ನೆರೆಹೊರೆಯವರೊಂದಿಗೆ ಕ್ರಿಯಾತ್ಮಕವಾಗಿ ಒಡನಾಡುವಂತೆ ಬಯಸುತ್ತದೆ. ಇದರ ಗುರಿ ಜನರಿಗೆ ನಗರದ ವಿಭಿನ್ನ ಅನುಭವಗಳನ್ನು ವಿವಿಧ ಆಯಾಮಗಳಲ್ಲಿ ಅನ್ವೇಷಿಸುವಂತೆ ಮಾಡುವುದಾಗಿದೆ. ನಗರ ಜೀವನವನ್ನು ಸಂಬಂಧಗಳೊಂದಿಗೆ ಹೊಸ ಬಗೆಗಳಲ್ಲಿ ಉತ್ಸಾಹದಿಂದ ಕಲ್ಪಿಸಿಕೊಳ್ಳಲು ಸಾಧ್ಯ ಮಾಡುವುದಾಗಿದೆ.

ನಮ್ಮ 560, ನಮ್ಮ ಪ್ರಾಜೆಕ್ಟ್ , ನಮ್ಮ ಪಿನ್‌ಕೋಡ್

**ಪ್ರಾಜೆಕ್ಟ್ 560 ಸಿಟಿ ಇಂಡಿಯಾದ ಸಹಭಾಗಿತ್ವ ಹೊಂದಿದೆ.**

citi